ಕರಮಚಂದ ಬೆನ್ನು ಬಾಗಿಸಿ, ನೆಲದ ಮೇಲೆ ಮೂಡಿದ್ದ ನೀಲಿ ಗುರುತಿನತ್ತ ಬೆರಳು ತೋರಿದ. ಬೋಪಣ್ಣನ ಮೊಗದಲ್ಲೂ ಅಚ್ಚರಿಯಿತ್ತು. ಮತ್ತೆ ಜ್ಞಾಪಿಸಿಕೊಂಡವನಂತೆ ಉತ್ತರಿಸಿದ.

"ಗೊತ್ತಾಯ್ತು. ಇದು ಶಾಯಿ ಗುರುತು. ಪರ್ಸಿನಲ್ಲಿ ನಿನ್ನೆ ಖರೀದಿಸಿದ್ದ ಶಾಯಿ ಬಾಟಲಿ ಇತ್ತು. ಶಾಯಿ ಬಾಟಲಿ ಒಡೆದಿರಬೇಕು.''

ಒಡೆದ ಬಾಟಲಿಯಿಂದ ಚೆಲ್ಲಿದ ಶಾಯಿ! ಒಂದೇ ಒಂದು ಕಲೆ! ಕರಮಚಂದ ಚುರುಕಿನಲ್ಲಿ ಕೋಣೆ ತುಂಬಾ ಚಲಿಸಿದ. ಬೇರೆಲ್ಲೂ ಅಂತಹ ಕಲೆ ಗೋಚರಿಸಲಿಲ್ಲ.

"ನೀವು ರಾತ್ರಿ ಎಷ್ಟು ಹೊತ್ತಿಗೆ ಮಲಗಿದ್ದು? ನಿಮ್ಮ ಮಗ ಆಗಲೇ ಮಲಗಿದ್ನಾ?"

"ಹತ್ತೂ ಮುಕ್ಕಾಲು ಆಗಿದ್ದಿರಬಹುದು. ಹಜಾರದಲ್ಲೇ ಟೀವಿ ನೋಡ್ತಾ ಇದ್ದೆ. ಅಲ್ಲಿಂದ ಮಗನ ಮಗನ ಕೋಣೆ ಕಾಣಿಸದು. ಹಾಗಾಗಿ ಮಗ ಎಷ್ಟು ಹೊತ್ತಿಗೆ ಮಲಗಿದ ಅಂತ ನಾನು ಗಮನಿಸ್ಲಿಲ್ಲ."

"ನಿಮ್ಮ ಮಗನ ಕೋಣೆ ಎಲ್ಲಿ?"

"ಹಜಾರಕ್ಕೆ ತಾಗಿಕೊಂಡು ಉಗ್ರಾಣ. ಅದರ ಪಕ್ಕದಲ್ಲಿರುವ ಕೋಣೆ ಮಾಲೀಕ ಪಾಪುಟ್ಟಿದು. ಯಾವಾಗ್ಲೂ ಬೀಗ ಹಾಕಿಯೇ ಇರುತ್ತೆ. ಯಾಕಂದ್ರೆ ಕೀ ಇರೋದು ಅವ್ನ ಹತ್ರಾನೇ. ಅದನ್ನ ನಮ್ಗೆ ಬಾಡಿಗೆಗೆ ಕೊಟ್ಟಿಲ್ಲ. ಅದರಲ್ಲಿ ಅವ್ನ ಸೊತ್ತುಗಳಿವೆ. ಅದರ ಪಕ್ಕದಲ್ಲಿರೋದು ಮಗನ ಕೋಣೆ. ಅದಕ್ಕೆ ಒತ್ತಿಕೊಂಡಿರುವ ಬೆಡ್‌ರೂಮನ್ನು ಮಗಳು ಉಪಯೋಗಿಸ್ತಾಳೆ. ಅಲ್ಲೇ ಮುಂದೆ ಕಿಚನ್ ಇದೆ." ಬೋಪಣ್ಣ ಚಿತ್ರಣ ನೀಡಿದ.

"ಅಂದ್ರೆ ಮಾಲೀಕ ಪೂರ್ತಿ ಮನೆ ಬಾಡಿಗೆಗೆ ಕೊಟ್ಟಿಲ್ವೇ? ಇದ್ರಿಂದ ನಿಮ್ಗೆ ತೊಂದ್ರೆ ಅಲ್ವೇ? ಕೋಣೆ ನೋಡೋಕೆ ಅಂತ ಆತ ಬಂದ್ರೆ, ನಿಮ್ಗೆ ಇಲ್ಲ ಅನ್ನೋಕೆ ಆಗೋದಿಲ್ಲ, ಅಲ್ವೆ?" ನಾನು ವಿಚಾರಿಸಿದೆ.

"ಹಾಗೇನೂ ಇಲ್ಲ. ನಾವಿಲ್ಲಿ ಬಂದು ನಾಲ್ಕು ತಿಂಗಳು ಕಳೀತು. ಒಮ್ಮೆನೂ ಆತ ಬಂದದ್ದಿಲ್ಲ. ಪೂರ್ಣವಾಗಿ ಫರ್ನಿಶ್ಡ್ ಆಗಿರೋ ಮನೆ ಕಮ್ಮಿ ಬಾಡಿಗೆಗೆ ಸಿಗುವಾಗ, ಆ ಕೋಣೆ ಬಗ್ಗೆ ನಾನು ಆಕ್ಷೇಪ ಎತ್ತಲಿಲ್ಲ." ಬೋಪಣ್ಣ ಸಮರ್ಥಿಸಿಕೊಂಡ.

"ನಿಮ್ಗೆ ರಾತ್ರಿ ಏಳುವ ಅಭ್ಯಾಸ ಇದೆಯಾ?" ಕರಮಚಂದ ಪ್ರಶ್ನಿಸಿದ.

"ಒಂದೆರಡು ಬಾರಿ ಏಳ್ತೀನಿ. ಮೂತ್ರಕೋಶದ ಸೋಂಕು ಇದೆ. ಮೂತ್ರ ಮಾಡಲೇಬೇಕು."

"ಮಲಗುವ ಕೋಣೆಲೇ ಟಾಯ್ಲೆಟ್ ಇದೆಯಾ?"

"ಇಲ್ಲ. ಇರೋದು ಎರಡೇ ಟಾಯ್ಲೆಟ್. ಅಲ್ನೋಡಿ, ಹಜಾರದ ಕೊನೆಯಲ್ಲಿ. ಇನ್ನೊಂದು, ಹೊರಗಡೆ, ಅಡುಗೆ ಕೋಣೆ ಪಕ್ಕದಲ್ಲಿದೆ. ಹಳೆಯ ಮನೆ. ಯೋಜನಾಬದ್ಧವಾಗಿ ಕಟ್ಟಿಸಿದ್ದಲ್ಲ."

ನಾವು ಹಜಾರದ ಬಾಗಿಲಿನಿಂದ ಪುಟ್ಟ ನಡುಮನೆ ಪ್ರವೇಶಿಸಿದೆವು. ಅದಕ್ಕೆ ನಾಲ್ಕು ಕೋಣೆಗಳು ತೆರೆದುಕೊಂಡಿದ್ದವು. ಬಲ ಅಂಚಿನಲ್ಲಿ ಗೋಡೆಯ ಸನಿಹವಿರುವ ಬಾಗಿಲು ಅಡುಗೆಕೋಣೆ ಮತ್ತು ಹಿಂಭಾಗಕ್ಕೆ ಹೋಗಲು.

"ನಿನ್ನೆ ಟಾಯ್ಲೆಟ್ಟಿಗೆ ಬಂದಾಗ ಏನಾದ್ರೂ ವಿಶೇಷ ಕಂಡಿದ್ರಾ?"

"ಇಲ್ಲಾ ಸಾರ್, ನನ್ಗೇನಾದ್ರೂ ಕನಸೇ ಕಳ್ಳತನ ಆಗುತ್ತೇ ಅಂತ."

ಕರಮಚಂದ ನಡುಮನೆಯ ನೆಲವನ್ನು ಶೋಧಿಸುತ್ತಾ, ಬೀಗ ಜಡಿಯಲಾಗಿದ್ದ ಬಾಗಿಲನ್ನು ಪರಿಶೀಲನೆಗೆ ತೊಡಗಿದವನು, ಏಕಾಏಕಿ ಉದ್ಗಾರ ತೆಗೆದ,

"ಬಿದ್ದಪ್ಪ, ಇಲ್ನೋಡು, ಕಲೆ!"

ನಾನು ಕತ್ತು ಬಗ್ಗಿಸಿ, ನಿರುಕಿಸಿದೆ. ಬಾಗಿಲ ಮೇಲೆ ಅದೇ ಶಾಯಿಯ ಗುರುತು! ಎರಡನೆಯ ಕಲೆ!! ನಾನು ಮುಚ್ಚಿದ ಬಾಗಿಲ ಕೀಲಿ ಸಂಧಿಯಲ್ಲಿ ದೃಷ್ಟಿ ಹೂಡಿದೆ. ದೂಳು ಹಿಡಿದ ಹಳೆಯ ಸಾಮಾನುಗಳ ಪಾರ್ಶ್ವ ನೋಟ ಕಾಣಿಸಿತು.